# ಪ್ರಿಸ್ಕೂಲ್‌ನಿಂದಲೇ ಮಕ್ಕಳಿಗೆ ಇಂಗ್ಲಿಷ್‌ನೊಂದಿಗೆ ಕನ್ನಡ ಕಲಿಸುವ ಆಟಮ್ ಲೀವ್ಸ್

ಆಟಮ್ ಲೀವ್ಸ್ ಬೆಂಗಳೂರಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಿಸ್ಕೂಲ್ ಸರಣಿಯಾಗಿದ್ದು ಬಹಳ ಅಲ್ಪಕಾಲದಲ್ಲಿಯೇ ಅತ್ಯಂತ ಜನಪ್ರಿಯತೆ ಗಳಿಸಿದೆ. ಸಂಸ್ಥೆಯ ಸಂಸ್ಥಾಪಕರಾದ ಶರತ್ ಖಾದ್ರಿ ಮತ್ತು ಪಲ್ಲವಿ ಅವರ ಕಾರ್ಪೊರೇಟ್ ಕ್ಷೇತ್ರದ ಅನುಭವದ ಮೂಲಕ, ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಬದಲಾವಣೆಗಳನ್ನು ಕಂಡುಕೊಂಡರು. ಈ ಅನ್ವೇಷಣೆಯೇ 'ಆಟಮ್ ಲೀವ್ಸ್' ಪ್ರಿಸ್ಕೂಲ್ ಸರಣಿ ಪ್ರಾರಂಭಕ್ಕೆ ಪ್ರೇರಣೆ.

ಕನ್ನಡದ ಖ್ಯಾತ ಕವಿ ಪು.ತಿ.ನರಸಿಂಹಾಚಾರ್ ಅವರ ಮೊಮ್ಮಗನಾಗಿರುವ ಶರತ್ ಖಾದ್ರಿ ಅವರಿಗೆ ಸಹಜವಾಗಿಯೇ ಕನ್ನಡದ ಮೇಲೆ ಪ್ರೀತಿ ಹೆಚ್ಚು. ಇದರಿಂದ ಆಟಮ್ ಲೀವ್ಸ್ ಪ್ರಿಸ್ಕೂಲ್‌ಗಳಲ್ಲಿ ಕನ್ನಡ ಭಾಷೆಗೆ ಪ್ರಮುಖ ಆದ್ಯತೆ ನೀಡಲಾಗುತ್ತದೆ. ಇಂಗ್ಲಿಷ್‌ನೊಂದಿಗೆ ಕನ್ನಡ ಭಾಷೆಯನ್ನೂ ಅಷ್ಟೇ ಪರಿಣಾಮಕಾರಿಯಾಗಿ ಕಲಿಸಲಾಗುತ್ತದೆ. ಪೋಷಕರೂ ಈ ಉದ್ದೇಶಕ್ಕೆ ಒತ್ತಾಸೆಯಾಗಿದ್ದಾರೆ. ಕನ್ನಡ ಗೊತ್ತಿಲ್ಲದ ಅನ್ಯಭಾಷೆಯ ಪೋಷಕರೂ ತಮ್ಮ ಮಕ್ಕಳು ಕನ್ನಡ ಭಾಷೆ ಕಲಿಯುವುದನ್ನು ಆನಂದಿಸುತ್ತಿದ್ದಾರೆ.

ಡಿಸೆಂಬರ್ 2017ರಲ್ಲಿ ಪ್ರಾರಂಭವಾದ ಆಟಮ್ ಲೀವ್ಸ್, ಇಂದು ಬೆಂಗಳೂರಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ, ಪೋಷಕರು ಇಷ್ಟಪಟ್ಟು ಸೇರಿಸಲು ಬಯಸುವ ಪ್ರಿಸ್ಕೂಲ್ ಸರಣಿಗಳಲ್ಲಿ ಒಂದಾಗಿದೆ.

2018-19ರಲ್ಲಿ 6 ಕೇಂದ್ರಗಳಿಗೆ ವಿಸ್ತರಿಸಿ, ನಂತರ ಕೋವಿಡ್-19 ಸಾಂಕ್ರಾಮಿಕ ಈ ವೇಗಕ್ಕೆ ತಡೆಯೊಡ್ಡಿತು. 2022ರಲ್ಲಿ 6 ಕೇಂದ್ರಗಳಿಂದ 2023-24ರಲ್ಲಿ 16 ಕೇಂದ್ರಗಳಿಗೆ ವಿಸ್ತರಿಸಿತು. 2027ರ ವೇಳೆಗೆ ಬೆಂಗಳೂರಿನಲ್ಲಿ 100 ಕೇಂದ್ರಗಳ ಗುರಿ ಹೊಂದಿದೆ.

ಆಟಮ್ ಲೀವ್ಸ್ ಮಕ್ಕಳಿಗೆ ಕಲಿಸುವ ರೀತಿ ವಿನೂತನವಾಗಿದೆ. ಬಾಲ್ಯದಲ್ಲಿಯೇ ಮಕ್ಕಳು ವೇದಿಕೆಯ ಭಯವನ್ನು ಬಿಡಬೇಕು. ಎಲ್ಲರ ಎದುರಿನಲ್ಲಿ ಧೈರ್ಯವಾಗಿ ಮಾತನಾಡಬೇಕು ಎಂಬ ಉದ್ದೇಶದಿಂದ ವಿಶೇಷವಾದ ವೇದಿಕೆ ಮಕ್ಕಳಿಗೆಂದೇ ಪ್ರತಿ ಆಟಮ್ ಲೀವ್ಸ್ ಪ್ರಿಸ್ಕೂಲ್‌ನಲ್ಲಿ ನಿರ್ಮಿಸಲಾಗಿದೆ. ಅಲ್ಲಿ ಮಕ್ಕಳು ತಮ್ಮ ಸಭೆಯಲ್ಲಿ ಮಾತನಾಡುವ ರೀತಿ ನೀತಿ ಕಲಿಯಬಹುದು. ಪ್ರತಿ ತಿಂಗಳಿಗೂ ಒಂದರಂತೆ ವಾರ್ಷಿಕ ಎಂಟು ಪುಸ್ತಕಗಳಿದ್ದು ಮಕ್ಕಳಿಗೆ ಈ ಅವಧಿಯಲ್ಲಿ ಎಷ್ಟು ಕಲಿಯಲು ಸಾಧ್ಯವಾಗುತ್ತದೋ ಅಷ್ಟೇ ಕಲಿಸುತ್ತದೆ. ಎಲ್ಲ ಪುಸ್ತಕಗಳ ವಿಷಯವನ್ನೂ ಒಟ್ಟಿಗೆ ತುರುಕುವಂತೆ ಮಾಡುವುದಿಲ್ಲ. ಈ ಎಲ್ಲವೂ ಪ್ರತಿಯೊಂದು ಆಟಮ್ ಲೀವ್ಸ್ ಸ್ಕೂಲ್‌ನಲ್ಲೂ ಒಂದೇ ರೀತಿಯಲ್ಲಿರುತ್ತದೆ.

ಆಟಮ್ ಲೀವ್ಸ್‌ನಲ್ಲಿ ಮಕ್ಕಳನ್ನು ನಮ್ಮ ಸುತ್ತಲಿನ ಪರಿಸರದಲ್ಲಿ ತಿರುಗಾಡಲು ಅವಕಾಶ ಕಲ್ಪಿಸಿ ಅವರಲ್ಲಿ ಪರಿಸರದ ಕುರಿತು ಸಂವೇದನಾಶೀಲರನ್ನಾಗುವಂತೆ ಮಾಡುತ್ತದೆ. ಇದಲ್ಲದೆ ನಮ್ಮ ಸಂಸ್ಕೃತಿ ಕುರಿತಾದ ಪಠ್ಯಕ್ರಮ ರೂಪಿಸಲಾಗಿದೆ.

ದೇಶದ ನಮ್ಮ ಸಂಸ್ಕೃತಿಗೆ ಆದ್ಯತೆ ನೀಡುವ ಆಟಮ್ ಲೀವ್ಸ್‌ನಲ್ಲಿ ನಮ್ಮ ಪ್ರತಿಯೊಂದು ಹಬ್ಬವನ್ನೂ ಅದೇ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆಚರಿಸಲಾಗುತ್ತದೆ. ಸಂಕ್ರಾಂತಿ, ಯುಗಾದಿ, ಗೌರಿ ಗಣೇಶ, ಕೃಷ್ಣ ಜನ್ಮಾಷ್ಟಮಿ ಮುಂತಾದ ಪ್ರತಿಯೊಂದು ಹಬ್ಬವನ್ನೂ ಶಾಲೆಯಲ್ಲಿ ಆಚರಿಸುವ ಮೂಲಕ ನಮ್ಮ ಸಂಸ್ಕೃತಿಯ ಕುರಿತು ಗೌರವ ಹೆಚ್ಚುವಂತೆ ಮಾಡಲಾಗುತ್ತದೆ.

ಆಟಮ್ ಲೀವ್ಸ್ ವಿಶೇಷವೆಂದರೆ ಇಲ್ಲಿ ಯಾವುದೇ ಮಕ್ಕಳಿಗೆ ಗ್ಯಾಡ್ಜೆಟ್‌ಗಳೊಂದಿಗೆ ಆಡಲು ಅವಕಾಶವಿಲ್ಲ. ಸ್ಕ್ರೀನ್ ಟೈಮ್ ಇಲ್ಲದಿರುವುದು ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಿಸುತ್ತದೆ, ಹಲವು ವಿಷಯಗಳತ್ತ ಮಕ್ಕಳಲ್ಲಿ ಕುತೂಹಲ ಬೆಳೆಸುತ್ತದೆ.

ಕಾರ್ಪೊರೇಟ್ ವಲಯದಲ್ಲಿ ಹಲವು ವರ್ಷ ಅನುಭವ ಹೊಂದಿರುವ ಹಾಗೂ ಸಂಸ್ಥೆಯ ಸಂಸ್ಥಾಪಕ ಶರತ್ ಖಾದ್ರಿ, 'ಮಕ್ಕಳಲ್ಲಿ ಪುಟ್ಟ ವಯಸ್ಸಿನಲ್ಲಿಯೇ ಕನ್ನಡ ಭಾಷೆ ಕಲಿಸುವುದು ಅವರಲ್ಲಿ ಭಾಷಾ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುತ್ತದೆ. ಇದರಿಂದ ನಾವು ಕನ್ನಡ ಕಲಿಸಲು ಆದ್ಯತೆ ನೀಡುತ್ತೇವೆ. ಆಟಮ್ ಲೀವ್ಸ್ ಸರಣಿ ವಿಸ್ತರಿಸಲು ಬೇರೆ ರಾಜ್ಯಗಳಲ್ಲಿ ಬೇಡಿಕೆ ಇದೆ. ಯಾವ ರಾಜ್ಯಕ್ಕೆ ಹೋದರೂ ಅಲ್ಲಿನ ಸ್ಥಳೀಯ ಭಾಷೆ ಕಲಿಸಲು ಆದ್ಯತೆ ನೀಡುತ್ತೇವೆ. ನಮ್ಮ ಬೋಧನೆಯ ವಿಧಾನಕ್ಕೆ ಪೋಷಕರ ಅಭೂತಪೂರ್ವ ಬೆಂಬಲ ದೊರೆತಿದೆ' ಎನ್ನುತ್ತಾರೆ.

ಸಾಫ್ಟ್‌ವೇರ್ ಉದ್ಯಮದಲ್ಲಿದ್ದು ಸ್ವಂತ ಆಸಕ್ತಿಯಿಂದ ಆಟಮ್ ಲೀವ್ಸ್ ಪ್ರಾರಂಭಿಸಿದ ಪಲ್ಲವಿ 'ಮಕ್ಕಳು ತಾವು ಬೆಳೆಯುವ ಹಂತದಲ್ಲಿಯೇ ಅವರ ಭಾಷೆಯ ಕಲಿಕೆಗೆ ಆದ್ಯತೆ ನೀಡಿದರೆ ಅವರ ಗ್ರಹಿಕೆಯ ಶಕ್ತಿ ಹೆಚ್ಚಾಗುತ್ತದೆ. ಆದರೆ ಪುಟ್ಟ ಮಕ್ಕಳ ಭಾಷೆಯ ಕಲಿಕೆಯ ಬಗ್ಗೆ ಯಾರೂ ಹೆಚ್ಚಾಗಿ ಗಮನ ನೀಡುವುದಿಲ್ಲ. ಈ ನಿಟ್ಟಿನಲಿ ಆಟಮ್ ಲೀವ್ಸ್ ಪ್ರಾದೇಶಿಕ ಭಾಷೆ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರಿನಲ್ಲಿ ಕನ್ನಡ ಭಾಷೆ ಕಲಿಸುವುದಕ್ಕೆ ಆದ್ಯತೆ ನೀಡಿತು. ಇದು ಎಲ್ಲ ಪೋಷಕರ ಬೆಂಬಲ ಪಡೆಯಿತು. ಇದಲ್ಲದೆ ಮಕ್ಕಳು ಆಡಿ, ನಲಿಯುತ್ತಾ ಕಲಿಯಬೇಕೆ ಹೊರತು ಕಲಿಕೆ ಅವರಿಗೆ ಹೊರೆಯಾಗಬಾರದು. ಅದನ್ನು ಆಟಮ್ ಲೀವ್ಸ್ ಪ್ರಿಸ್ಕೂಲ್ ಮಾಡುತ್ತದೆ. ನಮ್ಮ ಪ್ರಿಸ್ಕೂಲ್ ಅಂದರೆ ಎಲ್ಲ ಮಕ್ಕಳಿಗೂ ಅಚ್ಚುಮೆಚ್ಚು' ಎನ್ನುತ್ತಾರೆ.



**Smt. Pallavi**
Founder: Autumn Leaves Preschool, Bangalore



**Mr. Sharat Khadri**
Co-Founder: Autumn Leaves Preschool, Bangalore

Autumn Leaves
ಆಟಮ್ ಲೀವ್ಸ್
9986 45 35 25
Playgroup
Nursery
LKG
UKG
Daycare

VK & BM EDUCATION EXCELLENCE AWARDS-2023

### ಆಟಮ್ ಲೀವ್ಸ್ ವಿಶೇಷತೆಗಳು

- ಪ್ರತಿಯೊಂದು ಹಬ್ಬವನ್ನೂ ಸಂಭ್ರಮದಿಂದ ಆಚರಿಸುವುದು
- ಇಂಗ್ಲಿಷ್‌ನೊಂದಿಗೆ ಕನ್ನಡ ಕಲಿಕೆ
- ಒತ್ತಡರಹಿತ ಕಲಿಕೆಗೆ ಮಾಸಿಕ ಪುಸ್ತಕಗಳು
- ಸಂಸ್ಕೃತಿ, ಸಂಪ್ರದಾಯಕ್ಕೆ ಒತ್ತು
- ವೇದಿಕೆಯ ಭಯ ನಿವಾರಣೆ
- ಪ್ರಕೃತಿಯ ಕಡೆಗೆ ಮಕ್ಕಳನ್ನು ಸಂವೇದನಾಶೀಲಗೊಳಿಸುವುದು

**For More detials contact Autumn Leaves 9986453525**
**Email id :** Info@autumnleavespreschools.com
**Website :** www.autumnleavespreschools.com